# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 2892 |
| ಸದಸ್ಯರ ಹೆಸರು | : | ಶ್ರೀ ಸಿ.ಎನ್.ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 30-03-2022 |
| ಉತ್ತರಿಸುವ ಸಚಿವರು | : | ಲೋಕೋಪಯೋಗಿ ಸಚಿವರು |

| ಕ್ರ. ಸಂ. | ಪ್ರಶ್ನೆಗಳು | ಉತ್ತರ |
|---|---|---|
| ಅ) | ಬೆಂಗಳೂರು-ಮೈಸೂರು ರಾಷ್ಟ್ರೀಯ ಹೆದ್ದಾರಿಯ ಕಾಮಗಾರಿಯನ್ನು ಪ್ರಾರಂಭ ಮಾಡಿ ಎಷ್ಟು ವರ್ಷಗಳಾಯಿತು; ಈ ಯೋಜನೆಯ ಒಟ್ಟು ಮೊತ್ತವೆಷ್ಟು; (ಮಾಹಿತಿ ಒದಗಿಸುವುದು) | **ಬೆಂಗಳೂರು-ಮೈಸೂರು ರಾಷ್ಟ್ರೀಯ ಹೆದ್ದಾರಿಯ-275 ಕಾಮಗಾರಿಯನ್ನು** ಭಾರತೀಯ ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಪ್ರಾಧಿಕಾರದವರಿಂದ ನಿರ್ವಹಿಸಲಾಗುತ್ತಿದೆ. ಅವರಿಂದ ಪಡೆದ ವಿವರಗಳು ಈ ಕೆಳಗಿನಂತಿದೆ<br><br>ಬೆಂಗಳೂರು – ಮೈಸೂರು ರಸ್ತೆಯು 10 ಪಥದ ರಸ್ತೆಯಾಗಿದ್ದು, 6 ಪಥದ ಮುಖ್ಯ ರಸ್ತೆಯನ್ನಾಗಿ ಹಾಗೂ 2 ಪಥದ ಸರ್ವೀಸ್ ರಸ್ತೆಯನ್ನು ಒಳಗೊಂಡಂತೆ ಎರಡು ಪ್ಯಾಕೇಜ್‌ಗಳಲ್ಲಿ ಕೈಗೊಳ್ಳಲಾಗಿರುತ್ತದೆ.<br><br>**ಮೊದಲನೇ ಪ್ಯಾಕೇಜ್**<br>ಕಿ.ಮೀ 18.00–ಬೆಂಗಳೂರಿನಿಂದ ಕಿ.ಮೀ 74.200 – ನಿಡಘಟ್ಟವರೆಗೆ ರಸ್ತೆಯ ಉದ್ದ 56.20 ಕಿ.ಮಿ. ಗಳಾಗಿರುತ್ತದೆ. ಕಾಮಗಾರಿಯ ಪ್ರಾರಂಭದ ದಿನಾಂಕ: 14.05.2019 (ಅಂದರೆ 2 ವರ್ಷ 10 ತಿಂಗಳ ಹಿಂದೆ) ಮತ್ತು ಕಾಮಗಾರಿಯ ಅನುಮೋದಿತ ಮೊತ್ತ: ರೂ.2190.00 ಕೋಟಿಗಳು<br><br>**ಎರಡನೇ ಪ್ಯಾಕೇಜ್**<br>ಕಿ.ಮೀ.74.200 – ನಿಡಘಟ್ಟ ದಿಂದ ಕಿ.ಮೀ 135.304 – ಮೈಸೂರಿನವರೆಗೆ, ರಸ್ತೆಯ ಉದ್ದ 61.10 ಕಿ.ಮಿ.ಗಳಾಗಿರುತ್ತದೆ. ಕಾಮಗಾರಿಯ ಪ್ರಾರಂಭದ ದಿನಾಂಕ:10.12.2019 (ಅಂದರೆ 2 ವರ್ಷ 3 ತಿಂಗಳ ಹಿಂದೆ) ಮತ್ತು ಕಾಮಗಾರಿಯ ಅನುಮೋದಿತ ಮೊತ್ತ: ರೂ.2283..50 ಕೋಟಿಗಳು. |
| ಆ) | ಈ ಯೋಜನೆಯ ಕಾಮಗಾರಿ ಯನ್ನು ಕೈಗೊಳ್ಳಲು ಅಂತರಾಷ್ಟ್ರೀಯ ಗ್ಲೋಬಲ್ ಟೆಂಡರ್ ಕರೆಯಲಾಗಿತ್ತೇ; ಹಾಗಿದ್ದಲ್ಲಿ ಅಂತಿಮ ಬಿಡ್‌ನಲ್ಲಿ ಯಾವ ಕಂಪನಿಯು ಈ ಕಾಮಗಾರಿಯನ್ನು ತನ್ನದಾಗಿಸಿಕೊಂಡು ನಡೆಸುತ್ತಿದೆ; (ವಿವರ ಒದಗಿಸುವುದು) | ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಮುಖ್ಯ ಕಛೇರಿ, ನವದೆಹಲಿ ಮುಖಾಂತರ ರಾಷ್ಟ್ರ ಮಟ್ಟದ ಸ್ಪರ್ಧಾತ್ಮಕ ಗುತ್ತಿಗೆ ಪ್ರಕ್ರಿಯೆಯಲ್ಲಿ ಯಶಸ್ವಿಯಾದ ಅತೀ ಕಡಿಮೆ ಗುತ್ತಿಗೆ ದರ ನಮೂದಿಸಿದ ಮೆ: ದಿಲೀಪ್ ಬಿಲ್ಡ್‌ಕಾನ್ ರವರಿಗೆ ಗುತ್ತಿಗೆಯನ್ನು ವಹಿಸಿಕೊಡಲಾಗಿರುತ್ತದೆ. |

| | | |
|---|---|---|
| ಇ) | ಈ ರಾಷ್ಟ್ರೀಯ ಹೆದ್ದಾರಿಗೆ ಟೋಲ್ ನಿರ್ಮಾಣ ಮಾಡಲಾಗುವುದೇ; ಹಾಗೂ ಪ್ರತಿಯೊಂದು ವಾಹನಕ್ಕೂ ನಿಗದಿಪಡಿಸಿರುವ ಟೋಲ್‌ನ ದರವೆಷ್ಟು ಮತ್ತು ಬೆಂಗಳೂರು–ಮೈಸೂರು ನಡುವೆ ಬರುವ ಹಳ್ಳಿಗಳಿಗೆ, ಪಟ್ಟಣಗಳಿಗೆ ಸಾರ್ವಜನಿಕರು ಅವರ ಹೊಲ ಗದ್ದೆಗಳಿಗೆ ಮನೆಗಳಿಗೆ ಹೋಗಿ ಬರಬೇಕಾಗಿರುವುದರಿಂದ ಅವರಿಗೆ ಟೋಲ್‌ನಿಂದ ವಿನಾಯಿತಿ ನೀಡಲಾಗುವುದೇ; (ಮಾಹಿತಿ ನೀಡುವುದು) | ಹೌದು<br>ರಾಷ್ಟ್ರೀಯ ಹೆದ್ದಾರಿಯ 10 ಪಥದ ರಸ್ತೆಯಾಗಿದ್ದು, 6 ಪಥದ ಮುಖ್ಯ ರಸ್ತೆ ಆಕ್ಸಿಸ್ ಕಂಟ್ರೋಲ್ಡ್ ರಸ್ತೆಯಾಗಿದ್ದು, ಇದರ ಬಳಕೆಗೆ ಟೋಲ್ ಅಳವಡಿಸಲಾಗುವುದು. ಟೋಲ್ ಪ್ಲಾಜಾಗಳ ಈ ಕೆಳಗಿನಂತೆ ಒದಗಿಸಲಾಗಿದೆ.<br>1. ಕಣ್ಮಿಣಿಕೆ ಹಳ್ಳಿ ಕಿ.ಮೀ 23.95 – ಎಡಭಾಗದಲ್ಲಿ<br>2. ಶೇಷಗಿರಿಹಳ್ಳಿ ಕಿ.ಮೀ 26.80 – ಬಲಭಾಗದಲ್ಲಿ<br>3. ಗಣನ್ನೂರು ಕಿ.ಮೀ 116.50 – ಎರಡು ಭಾಗದಲ್ಲಿ<br>ಸದರಿ ಯೋಜನೆಯು ಸಂಪೂರ್ಣವಾಗಿ ಮುಕ್ತಾಯವಾಗದೇ ಇರುವುದರಿಂದ ಸದರಿ ಯೋಜನೆಗೆ ಈ ವರೆಗೂ ಆಗಿರುವ ಅಂತಿಮ ಕ್ಯಾಪಿಟಲ್ ಕಾಸ್ಟ್ ಬಗ್ಗೆ ನಿಖರವಾದ ಮೊತ್ತವು ಲಭ್ಯವಾಗಿರುವುದಿಲ್ಲ. ಆದ್ದರಿಂದ ಅಂತಿಮ ಕ್ಯಾಪಿಟಲ್ ಕಾಸ್ಟ್ ಮೊತ್ತವು ನಿಗಧಿಯಾದ ಕೂಡಲೇ ಕೇಂದ್ರ ಭೂಸಾರಿಗೆ ಮಂತ್ರಾಲಯದ ಟೋಲ್ ನಿಯಮವನ್ನು ಪಾಲಿಸಿ ಪ್ರತಿಯೊಂದು ವಾಹನಕ್ಕೂ ಟೋಲ್‌ನ ದರವನ್ನು ನಿಗದಿಪಡಿಸಲಾಗುವುದು.<br>ದ್ವಿಚಕ್ರ ವಾಹನ, ಮೂರು ಚಕ್ರ ವಾಹನ ಹಾಗೂ ಕೃಷಿ ಸಂಬಂಧಿತ ವಾಹನಗಳ ಓಡಾಟಕ್ಕಾಗಿ ಆರು ಪಥದ ಆಕ್ಸಿಸ್ ಕಂಟ್ರೋಲ್ಡ್ ರಸ್ತೆಯ ಎರಡು ಕಡೆಯೂ 2 ಪಥದ ಸರ್ವೀಸ್ ರಸ್ತೆಯನ್ನು ಒದಗಿಸಲಾಗಿರುತ್ತದೆ. |
| ಈ) | ಈ ಕಾಮಗಾರಿಯನ್ನು ಇನ್ನು ಎಷ್ಟು ದಿವಸದೊಳಗಾಗಿ ಮುಗಿಸಿ ಸಾರ್ವಜನಿಕರ ಅನುಕೂಲಕ್ಕಾಗಿ ನೀಡಲಾಗುವುದು; (ವಿವರ ಒದಗಿಸುವುದು) | **ಮೊದಲನೇ ಪ್ಯಾಕೇಜ್**<br>ಕಿ.ಮೀ 18.00–ಬೆಂಗಳೂರಿನಿಂದ ಕಿ.ಮೀ.74.200– ನಿಡಘಟ್ಟವರೆಗೆ ರಸ್ತೆಯ ಕಾಮಗಾರಿಯನ್ನು ದಿನಾಂಕ:02.05.2022 ರಂದು ಪೂರ್ಣಗೊಳಿಸಲಾಗುವುದು.<br>**ಎರಡನೇ ಪ್ಯಾಕೇಜ್**<br>ಕಿ.ಮೀ.74.200 – ನಿಡಘಟ್ಟದಿಂದ ಕಿ.ಮೀ.135.304 – ಮೈಸೂರಿನವರೆಗೆ ರಸ್ತೆ ಕಾಮಗಾರಿಯನ್ನು ದಿನಾಂಕ:07.09.2022 ರಂದು ಪೂರ್ಣಗೊಳಿಸಲಾಗುವುದು. |
| ಉ) | ಅದೇ ರೀತಿಯಾಗಿ ಮೈಸೂರಿನಿಂದ ಕುಶಾಲನಗರ ಮಾರ್ಗವಾಗಿ ಮಡಿಕೇರಿ–ಮಂಗಳೂರಿಗೆ ಈ ರಾಷ್ಟ್ರೀಯ ಹೆದ್ದಾರಿಯನ್ನು ಸೇರ್ಪಡೆ ಮಾಡಲಾಗುವುದೇ; (ಮಾಹಿತಿ ಒದಗಿಸುವುದು) | • ಕೇಂದ್ರ ಭೂ ಸಾರಿಗೆ ಮಂತ್ರಾಲಯದ ಗೆಜೆಟ್ ನೋಟಿಫಿಕೇಷನ್ ದಿನಾಂಕ: 23.11.2016ರನ್ವಯ ರಾಷ್ಟ್ರೀಯ ಹೆದ್ದಾರಿ–275ರ ಮೈಸೂರು–ಮಡಿಕೇರಿ ರಸ್ತೆಯನ್ನು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ ವಿಸ್ತೃತ ಯೋಜನಾ ವರದಿಯನ್ನು ಮುಂದುವರಿಸಲು ಹಸ್ತಾಂತರಿಸಲಾಗಿರುತ್ತದೆ.<br>• ರಾಷ್ಟ್ರೀಯ ಹೆದ್ದಾರಿ–275ರ ಮಡಿಕೇರಿ–ಮಂಗಳೂರು ರಸ್ತೆಯಲ್ಲಿ ಬರುವ ರಾಷ್ಟ್ರೀಯ ಹೆದ್ದಾರಿಯನ್ನು ರಾಷ್ಟ್ರೀಯ ಹೆದ್ದಾರಿ ವಲಯ ಲೋಕೋಪಯೋಗಿ ಇಲಾಖೆಯಿಂದ ನಿರ್ವಹಿಸುತ್ತಿದ್ದು, ಸದರಿ ರಸ್ತೆಯನ್ನು ಬೆಂಗಳೂರು–ಮೈಸೂರು ನಿರ್ಮಾಣದ ಯೋಜನೆಯಡಿ ಸೇರ್ಪಡೆ ಮಾಡುವ ಪ್ರಸ್ತಾವನೆ ಇರುವುದಿಲ್ಲ. |

| | | |
|---|---|---|
| ಊ) | ಈ ರಾಷ್ಟ್ರೀಯ ಹೆದ್ದಾರಿಯು ಮೈಸೂರಿನಿಂದ ಮಂಗಳೂರಿನವರೆಗೆ ಯಾವ ಯಾವ ಮಾರ್ಗದಲ್ಲಿ ಹಾದುಹೋಗುವುದು ಮತ್ತು ಎಲ್ಲೆಲ್ಲಿ ಬೈಪಾಸ್ ರಸ್ತೆಗಳನ್ನು ಮಾಡಲಾಗುತ್ತಿದೆ; (ಮಾಹಿತಿ ಒದಗಿಸುವುದು) | • ಭಾರತೀಯ ರಾಷ್ಟ್ರೀಯ ಅಭಿವೃದ್ಧಿ ಪ್ರಾದಿಕಾರದ ವ್ಯಾಪ್ತಿಯಲ್ಲಿ ರಾಷ್ಟ್ರೀಯ ಹೆದ್ದಾರಿ-275ರ ಮೈಸೂರು-ಮಡಿಕೇರಿ ಸೆಕ್ಷನ್ ಮಾರ್ಗವು ಶ್ರೀರಂಗಪಟ್ಟಣ, ಮೈಸೂರು, ಹುಣಸೂರು, ಪಿರಿಯಾಪಟ್ಟಣ ಮತ್ತು ಸೋಮವಾರಪೇಟೆ ತಾಲ್ಲೂಕಿನ ಆನೇಕಾಡು ಅರಣ್ಯದ ಮೂಲಕ ಹಾದು ಹೋಗುತ್ತದೆ.<br>• ರಾಷ್ಟ್ರೀಯ ಹೆದ್ದಾರಿ-275 ರ ಮಡಿಕೇರಿ-ಮಂಗಳೂರು ಸೆಕ್ಷನ್ ಮಾರ್ಗವು ಕುಶಾಲನಗರದಿಂದ ಪ್ರಾರಂಭವಾಗಿ ಮಡಿಕೇರಿ, ಸುಳ್ಯ, ಪುತ್ತೂರು ಹಾಗೂ ಬಂಟ್ವಾಳ ತಾಲ್ಲೂಕಿನ ಮಾಣಿ ಮಾರ್ಗವಾಗಿ ಹಾದು ಹೋಗುತ್ತದೆ.<br>• ರಾಷ್ಟ್ರೀಯ ಹೆದ್ದಾರಿ-275ರ ಮೈಸೂರು-ಮಡಿಕೇರಿ ರಸ್ತೆಯನ್ನು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾದಿಕಾರದವರು ಮೂರು ಪ್ಯಾಕೇಜ್‌ಗಳನ್ನಾಗಿ ವಿಂಗಡಿಸಿ 4 ಪಥದ ರಸ್ತೆಯನ್ನು ಮಾಡಲು ವಿಸ್ತೃತ ಯೋಜನಾ ವರದಿಯನ್ನು ತಯಾರಿಸಲು ಟೆಂಡರ್‌ನ್ನು ಕರೆದಿರುತ್ತಾರೆ. ಸದರಿ ಮೂರು ಪ್ಯಾಕೇಜ್ ಗಳಲ್ಲಿ ಮುಖ್ಯವಾಗಿ 4 ಬೈಪಾಸ್ ಗಳನ್ನು ನಿರ್ಮಿಸಲಾಗುವುದು.<br>1. ಹುಣಸೂರು, 2. ಬಿಳಿಕೆರೆ, 3. ಇಲವಾಲ, 4. ಮೈಸೂರು<br>• ರಾಷ್ಟ್ರೀಯ ಹೆದ್ದಾರಿ-275ರ ಮಡಿಕೇರಿ-ಮಂಗಳೂರು ರಸ್ತೆಯಲ್ಲಿ ಬರುವ ರಾಷ್ಟ್ರೀಯ ಹೆದ್ದಾರಿಯನ್ನು ರಾಷ್ಟ್ರೀಯ ಹೆದ್ದಾರಿ ವಲಯ ಲೋಕೋಪಯೋಗಿ ಇಲಾಖೆಯಿಂದ ನಿರ್ವಹಿಸುತ್ತಿದ್ದು, ಯಾವುದೇ ಬೈಪಾಸ್ ಮಾಡುವ ಪ್ರಸ್ತಾವನೆ ಇರುವುದಿಲ್ಲ. |
| ಋ) | ಮೈಸೂರಿನಿಂದ ಮಂಗಳೂರಿನವರೆಗೆ ಯಾವ ಕಂಪನಿಯು ಈ ಕಾಮಗಾರಿಯನ್ನು ಕೈಗೊಂಡಿದೆ ಹಾಗೂ ಇದಕ್ಕಾಗಿ ಖರ್ಚಾಗುತ್ತಿರುವ ಹಣವೆಷ್ಟು ಮತ್ತು ಈ ಕಾಮಗಾರಿಯನ್ನು ಎಷ್ಟು ದಿವಸದೊಳಗಾಗಿ ಮುಕ್ತಾಯ ಮಾಡಿ ಸಾರ್ವಜನಿಕರ ಸೇವೆಗೆ ಅನುವು ಮಾಡಿಕೊಡಲಾಗುವುದು? (ಸಂಪೂರ್ಣ ಮಾಹಿತಿ ನೀಡುವುದು) | • ಮೈಸೂರು-ಕುಶಾಲನಗರ ರಸ್ತೆಗೆ ಕಾಮಗಾರಿಯ ಗುತ್ತಿಗೆ ಪ್ರಕ್ರಿಯೆಯನ್ನು ಪ್ರಾರಂಭಿಸಲಾಗಿದೆ.<br>• ಕುಶಾಲನಗರ - ಮಡಿಕೇರಿ ವಿಸ್ತೃತ ಯೋಜನಾ ವರದಿಯು ಪ್ರಗತಿಯಲ್ಲಿರುತ್ತದೆ<br>• ರಾಷ್ಟ್ರೀಯ ಹೆದ್ದಾರಿ-275ರ ಮಡಿಕೇರಿ-ಮಂಗಳೂರು ರಸ್ತೆಯಲ್ಲಿ ಬರುವ ರಾಷ್ಟ್ರೀಯ ಹೆದ್ದಾರಿಯನ್ನು ರಾಷ್ಟ್ರೀಯ ಹೆದ್ದಾರಿ ವಲಯ ಲೋಕೋಪಯೋಗಿ ಇಲಾಖೆಯಿಂದ ನಿರ್ವಹಿಸುತ್ತಿದ್ದು ಯಾವುದೇ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಂಡಿರುವುದಿಲ್ಲ.<br>• ನಿರ್ವಹಣಾ ಕಾಮಗಾರಿಗಳ ಮೂಲಕ ರಸ್ತೆಯನ್ನು ಮೈಸೂರಿನಿಂದ - ಮಂಗಳೂರಿನವರೆಗೆ ವಾಹನ ಸಂಚಾರ ಯೋಗ್ಯವಾಗಿ ನಿರ್ವಹಿಸಲಾಗುತ್ತಿದೆ. |

ಕಡತ ಸಂಖ್ಯೆ: ಲೋಇ 134 ಸಿಎನ್‌ಹೆಚ್ 2022 (ಇ)

(ಸಿ.ಸಿ. ಪಾಟೀಲ)
ಲೋಕೋಪಯೋಗಿ ಸಚಿವರು